ಪುರಸಭೆ ಮತ್ತು ನಗರ ಸಭೆಯ ನೌಕರರಿಗೆ ಸರ್ಕಾರದಿಂದ ಸಂಬಳ

೮೨೩. ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):—ಮಾನ್ಯ ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ. —

ಅ) ಪುರಸಭಾ ಮತ್ತು ನಗರಸಭೆಗಳ ನೌಕರರಿಗೆ ಸರ್ಕಾರದಿಂದ ವೇತನ ಕೊಡುವ ಬಗ್ಗೆ ವರದಿ ಕೊಡಲು ಈ ಹಿಂದೆ ಸಮಿತಿಯನ್ನು ರಚಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆಯೇ ?

ಇ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ. ಟಿ. ಎನ್ ನರಸಿಂಹಮೂರ್ತಿ (ಬಂದರು, ವಸತಿ ಮತ್ತು ಮೀನುಗಾರಿಕೆ ಹಾಗೂ ನಗರಾಭಿವೃದ್ಧಿ ಸಚಿವರು).—

ಅ) ಪುರಸಭಾ ನೌಕರರಿಗೆ ಪ್ರತಿ ತಿಂಗಳು ತಪ್ಪದೆ ಸಂಬಳ ವಿತರಣೆ ಮಾಡುವ ಬಗ್ಗೆ ಸರ್ಕಾರವು ಏನು ವ್ಯವಸ್ಥೆ ಮಾಡಬಹುದೆಂಬುದರ ಬಗ್ಗೆ ವರದಿ ಮಾಡಲು ಸರ್ಕಾರವು ಆದೇಶ ಸಂ. ವಸಇ ೨೦ ಕೆಎಂಆರ್ ೮೭ರ ದಿನಾಂಕ ೨೦-೭-೧೯೮೭ ರಲ್ಲಿ ಶ್ರೀ ವೇಣುಗೋಪಾಲ ನಾಯ್ಡು ನಿವೃತ್ತ ಐ.ಎ-ಎಸ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ರಚಿಸಿದೆ.

ಆ) ಇಲ್ಲ.

ಇ) ಸಮಿತಿಯು ಈವರೆಗೂ ಒಂದೇ ಒಂದು ಸಭೆಯನ್ನು ನಡೆಸಿದೆ.

ಗ್ರಾಮಾಂತರ ಪ್ರದೇಶದಲ್ಲಿ ಕಡುಬಡವರಿಗೆ ಉಚಿತ ನಿವೇಶನ,

೮೨೦. ಶ್ರೀ ಕರಿಯಣ್ಣ (ಹೊಳೆಹೊನ್ನೂರು) ಮಾನ್ಯ ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ರಾಜ್ಯದ ಗ್ರಾಮಾಂತರ ಪ್ರದೇಶದ ಕಡುಬಡವರಿಗೆ ಉಚಿತ ನಿವೇಶನ ಕೊಡಲು ಕಾನೂನು ಇದೆಯೆ ?

ಆ) ಹಾಗಿದ್ದಲ್ಲಿ ಈ ಉಚಿತ ನಿವೇಶನ ಕೊಡುವವರು ಯಾರು ?

ಇ) ಈ ವರ್ಷ ಎಷ್ಟು ಉಚಿತ ನಿವೇಶನಗಳನ್ನು ಕೊಡಲು ಉದ್ದೇಶಿಸಲಾಗಿದೆ ?

ಶ್ರೀ. ಟಿ. ಎನ್. ನರಸಿಂಹಮೂರ್ತಿ (ಬಂದರು ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಇದೆ.

ಆ) ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಪರಿಷತ್ ಮುಖಾಂತರ ಹಂಚಲಾಗುವುದು.

ಇ) ೪೦,೦೦೦ ಉಚಿತ ನಿವೇಶನಗಳನ್ನು ಕೊಡಲು ಉದ್ದೇಶಿಸಲಾಗಿದೆ.

ಶಿವಮೊಗ್ಗ ನಗರಕ್ಕೆ ನೀರು ಸರಬರಾಜು ಯೋಜನೆ.

೮೨೮. ಶ್ರೀ ಕೆ. ಎಸ್. ಈಶ್ವರಪ್ಪ ,(ಶಿವಮೊಗ್ಗ) ಮಾನ್ಯ ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಶಿವಮೊಗ್ಗ ನಗರಕ್ಕೆ ಕುಡಿಯುವ ನೀರು ಪೂರೈಸಲು ಹೊಸ ಯೋಜನೆಯನ್ನು ತಯಾರಿಸಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಈ ಯೋಜನೆಗೆ ಎಷ್ಟು ಹಣ ಬೇಕಾಗಿದೆ.

ಇ) ಈ ಯೋಜನೆಯು ಎಂದು ಪ್ರಾರಂಭವಾಗಲಿದೆ ಹಾಗೂ ಯಾವಾಗ ಪೂರ್ಣಗೊಳ್ಳಲಿದೆ ?